ಏ) ಸಾಗುವಳಿ ವೆಚ್ಚ ಕಡಿಮೆ ಮಾಡಲು ಸಾವಯವ ಕೃಷಿ ಮತ್ತು ಜೀವಾಣು ಗೊಬ್ಬರ ಪ್ರೋತ್ಸಾಹ

ಐ) ಮಣ್ಣು ಪರೀಕ್ಷೆಯ ಆಧಾರದ ಮೇಲೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಕ್ರಮ

ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿರುವಂತಹ 6 ಜಿಲ್ಲೆಗಳಾದ ಶಿವಮೊಗ್ಗ, ಚಿತ್ರದುರ್ಗ, ಬೆಳಗಾಂ, ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಭಾರತ ಸರ್ಕಾರದ ವಿಶೇಷ ಪ್ಯಾಕೇಜ್

711 (1211) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) – ಸಹಕಾರ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ಸಹಕಾರ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಬೆಂಗಳೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ ಎಷ್ಟು ?

ಆ) ಸದಸ್ಯರಿಂದ ಹಣ ಸಂಗ್ರಹಿಸಿ ನಿವೇಶನ ಹಂಚದಿರುವ ಗೃಹ ನಿರ್ಮಾಣ ಸಹಕಾರ ಸಂಘಗಳೆಷ್ಟು ?

ಇ) ಈ ಅನಾನುಕೂಲತೆಗಳನ್ನು ತಪ್ಪಿಸಲು ಸರ್ಕಾರದ ಕ್ರಮವೇನು ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

ಅ) ಬೆಂಗಳೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ 195

ಆ) 49 ಗೃಹ ನಿರ್ಮಾಣ ಸಹಕಾರ ಸಂಘಗಳು ಸದಸ್ಯರಿಂದ ಹಣ ಸಂಗ್ರಹಿಸಿ ನಿವೇಶನ ಹಂಚಿರುವುದಿಲ್ಲ

ಇ) ಈ ಬಗ್ಗೆ ಸಂಬಂಧಪಟ್ಟ ಸಹಕಾರ ಸಂಘಗಳು ಸದಸ್ಯರಿಗೆ ನಿವೇಶನ ನೀಡಲು ಕ್ರಮವಿಡಬೇಕಾಗಿದೆ ಸಹಕಾರ ಸಂಘಗಳು ನಿವೇಶನ ಹಂಚಿಕೆಗಾಗಿ ಅಗತ್ಯವಿರುವ ಭೂಮಿಯನ್ನು ಪಡೆಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಸಂಪರ್ಕಿಸಬಹುದಾಗಿದೆ

713 (719) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) :– ಸಹಕಾರ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ಸರ್ಕಾರದ ಅವೈಜ್ಞಾನಿಕ ಸಾಲ ಮನ್ನಾ ಯೋಜನೆಯಿಂದ ಜಿಲ್ಲಾ ಮಟ್ಟದ ಸಹಕಾರ ಬ್ಯಾಂಕುಗಳು ದಿವಾಳಿ ಅಂಚಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ರಾಜ್ಯ ಸರ್ಕಾರವು ರೈತರ ಯಾವ ಯಾವ ಸಾಲವನ್ನು ಮನ್ನಾ ಮಾಡಿದೆ? ಇವುಗಳ ಒಟ್ಟು ಮೊತ್ತ ಎಷ್ಟು ?

ಇ) ಈ ಸೌಲಭ್ಯ ಪಡೆದ ರೈತರ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ಕೊಡುವುದು)

ಈ) ಈ ಸಾಲ ಮನ್ನಾ ಸರ್ಕಾರ ಯಾವ ಯಾವ ಸಂಸ್ಥೆಗೆ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಿದೆ ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

ಅ) ಜಿಲ್ಲಾ ಮಟ್ಟದ ಸಹಕಾರ ಬ್ಯಾಂಕುಗಳ ದಿವಾಳಿ ಅಂಚಿಗೆ ತಲುಪಿಲ್ಲ

ಆ) ರಾಜ್ಯದಲ್ಲಿ ದಿನಾಂಕ 1–1–2006 ರಿಂದ 31–12–2006ರ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳಿಂದ ರೈತರು ರೂ 25,000/–ವರೆಗೆ ಪಡೆದಿರುವ ಬೆಳೆ ಸಾಲವನ್ನು ಬಡ್ಡಿ ಸಹಿತ ಮನ್ನಾ ಮಾಡಲಾಗಿದೆ ರೂ 25,000/–ಮೇಲ್ಪಟ್ಟು ಸಾಲ ಪಡೆದಿರುವ ಪ್ರಕರಣಗಳಲ್ಲಿ ರೂ 25,000ಕ್ಕೆ ಮೇಲ್ಪಟ್ಟು ಹೆಚ್ಚುವರಿ ಅಸಲನ್ನು ದಿನಾಂಕ 31–5–2007ರೊಳಗೆ ಸಂಬಂಧಪಟ್ಟ ಸಹಕಾರಿ ಸಂಸ್ಥೆಗಳಿಗೆ ಮರು ಪಾವತಿಸಿದಲ್ಲಿ ರೂ 25,000/– ಅಸಲು ಮರು ಪಾವತಿ ದಿನಾಂಕದವರೆಗೆ ಬಡ್ಡಿಯನ್ನು ಮನ್ನಾ ಮಾಡಲಾಗಿದೆ ಇವುಗಳ ಒಟ್ಟು ಮೊತ್ತವನ್ನು ಸುಮಾರು ರೂ 2300 ಕೋಟಿ ಎಂದು ಅಂದಾಜಿಸಲಾಗಿದೆ

ಇ) ಈ ಸೌಲಭ್ಯ ಪಡೆದ ರೈತರ ಸಂಖ್ಯೆ 1045286 ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ

ಈ) ಇದುವರೆಗೆ ಸರ್ಕಾರವು ಸಹಕಾರಿ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿರುವ ಹಣದ ಮೊತ್ತ ರೂ 750 00 ಕೋಟಿಗಳು ಜಿಲ್ಲಾವಾರು ವಿವರವನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ದಿನೇಶ್ ಗುಂಡೂರಾವ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 719ರ ಅನುಬಂಧ - 1

ರೂ ಲಕ್ಷಗಳಲ್ಲಿ

ಕ್ರ ಸಂ	ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಹೆಸರು	ಸಾಲ ಮನ್ನಾ ಯೋಜನೆಯಡಿಯಲ್ಲಿ ಲಾಭ ಪಡೆದುಕೊಂಡಿರುವ ಸಾಲಗಾರರ ಸಂಖ್ಯೆ
1	ಬೆಂಗಳೂರು	24070
2	ಕೋಲಾರ	1516
3	ಚಿತ್ತದುರ್ಗ	15648
4	ಶಿವಮೊಗ್ಗ	50541

ಕ್ರ ಸಂ	ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಹೆಸರು	ಸಾಲ ಮನ್ನಾ ಯೋಜನೆಯಡಿಯಲ್ಲಿ ಲಾಭ ಪಡೆದುಕೊಂಡಿರುವ ಸಾಲಗಾರರ ಸಂಖ್ಯೆ
5	ದಾವಣಗೆರೆ	48957
6	ತುಮಕೂರು	25881
7	ಮೈಸೂರು	31583
8	ಮಂಡ್ಯ	54720
9	ಹಾಸನ	39775
10	ದಕ್ಷಿಣ ಕನ್ನಡ	55205
11	ಕೊಡಗು	26628
12	ಚಿಕ್ಕಮಗಳೂರು	14214
13	ಬೆಳಗಾವಿ	181352
14	ಬಿಜಾಪುರ	101255
15	ಬಾಗಲಕೋಟೆ	109535
16	ಧಾರವಾಡ	40278
17	ಕೆನರಾ ಸಿರ್ಸಿ	44279
18	ಗುಲ್ಬರ್ಗಾ	41367
19	ಬೀದರ್	76099
20	ರಾಯಚೂರು	35693
21	ಬಳ್ಳಾರಿ	26690
	ಒಟ್ಟು	1045286

ಒಟ್ಟಾರೆಯಾಗಿ ರಾಜ್ಯದಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ 1044290 ರೈತ ಸದಸ್ಯರು ಹಾಗೂ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ವತಿಯಿಂದ 996 ರೈತ ಸದಸ್ಯರು ಸಾಲಮನ್ನಾ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ದಿನೇಶ್ ಗುಂಡೂರಾವ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 719ರ ಅನುಬಂಧ – 2

(ರೂ ಲಕ್ಷಗಳಲ್ಲಿ)

ಕ್ರ. ಸಂ	ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಹೆಸರು	ರೂ 750 ಕೋಟಿಗಳ ಅನುದಾನದಲ್ಲಿ ಹಂಚಿಕೆ ಮಾಡಿ ಬಿಡುಗಡೆ ಮಾಡಿರುವ ಮೊತ್ತ	
1	ಬೆಂಗಳೂರು	2505 87	
2	ಕೋಲಾರ	155 28	
3	ಚಿತ್ರದುರ್ಗ	1177 23	
4	ಶಿವಮೊಗ್ಗ	4468 92	
5	ದಾವಣಗೆರೆ	5026 92	
6	ತುಮಕೂರು	2513 70	
7	ಮೈಸೂರು	2167 41	
8	ಮಂಡ್ಯ	4164 89	
9	ಹಾಸನ	2713 28	
10	ದಕ್ಷಿಣ ಕನ್ನಡ	2001 83	
11	ಕೊಡಗು	1228 13	
12	ಚಿಕ್ಕಮಗಳೂರು	737 31	
13	ಬೆಳಗಾವಿ	11222 51	
14	ಬಿಜಾಪುರ	7734 88	
15	ಬಾಗಲಕೋಟೆ	6386 37	
16	ಧಾರವಾಡ	3714 62	
17	ಕೆನರಾ ಸಿರ್ಸಿ	2845 32	
18	ಗುಲ್ಬರ್ಗಾ	2415 06	
19	ಬೀದರ್	5655 75	
20	ರಾಯಚೂರು	3228 72	
21	ಬಳ್ಳಾರಿ	1936 00	
22	ವಾಣಿಜ್ಯ ಬ್ಯಾಂಕುಗಳಿಗೆ ಅಭ್ಯರ್ಪಿಸಲ್ಪಟ್ಟಿರುವ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ	1000 00	
	ಒಟ್ಟು /	75 000–00	
	ರೂ	750 00	ಕೋಟಿಗಳು